**<u>ಸಾಕ್ಷಿಯನ್ನು ದಿನಾಂಕ: 21.04.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಸಿ ಎಲ್ ವಿ ವಕೀಲರಿಂದ:</u>**

ದಾವಾ ಆಸ್ತಿಯಲ್ಲಿ ಅಡಿಕೆ ಸಸಿಗಳನ್ನು ಕ್ರಯಕ್ಕೆ ಪಡೆದ ನಂತರ ನಾವೇ ಬೆಳೆಸಿರುತ್ತೇವೆ. ನಿಪಿ.8 ರಲ್ಲಿ ಅಡಿಕೆ ಎಂದು ನಮೂದಾಗಿರುವುದು ಸರಿ ಇದೆ. ನಿಪಿ.8 ರಿಂದ 16ರಲ್ಲಿ ಅಡಿಕೆ ಎಂದು ನಮೂದಾಗಿರುವುದು ಸರಿ ಇದೆ. ದಾವಾ ಆಸ್ತಿಯನ್ನು ಕುಂಟೆಗೆ ಮಾತನಾಡದೇ ಒಟ್ಟಾರೆಯಾಗಿ ಮಾರಾಟಕ್ಕೆ ಮಾತುಕತೆಯಾಗಿರುತ್ತದೆ. ನಿಪಿ.1ರ ಆಗುವ 15-20 ದಿನಗಳ ಹಿಂದೆ ಕ್ರಯದ ಮಾತುಕತೆಯಾಗಿತ್ತು. ಸದರಿ ಮಾತುಕತೆಗೆ ನಮ್ಮ ಮನೆಯಲ್ಲಿಯೇ ಸೇರಲಾಗಿತ್ತು. ಸದರಿ ಮಾತುಕತೆಗೆ ನನ್ನ ಮಾರಾಟಗಾರರ ಮನೆಯವರಾದ ಮೂಡ್ಲಗಿರಿಯಯ್ಯ, ಗಂಗಮ್ಮ, ವೆಂಕಟೇಶ್ ಮತ್ತು ಮುತ್ತುರಾಜು ರವರು ಸೇರಿದ್ದರು. ನಿಪಿ.1 ರ ದಿನವೇ ಕ್ರಯದ ಮೊತ್ತವನ್ನು ಪಾವತಿಸಲಾಗಿತ್ತು.

2. ನಿಪಿ.1ರ ಸಾಕ್ಷಿದಾರರು ಮೂಡ್ಲಗಿರಿಯಯ್ಯ ನವರ ಪರಿಚಯಸ್ಥರಾಗಿದ್ದು, ಅವರೇ ಕರೆತಂದಿದ್ದರು. ಸದರಿ ಸಾಕ್ಷಿದಾರರನ್ನು ನಿಪಿ1ಕ್ಕೂ ಮೊದಲು ನೋಡಿರಲಿಲ್ಲ ಮತ್ತು ಅವರೊಂದಿಗೆ ಯಾವುದೇ ವ್ಯವಹಾರ ಹೊಂದಿರಲಿಲ್ಲ. ನಿಪಿ.1ರ ಒಕ್ಕಣೆಯನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಿಪಿ.1ರ 2ನೇ ಪುಟದಲ್ಲಿ ಹಿಂದೆಯೇ ಹಣವನ್ನು ಪಡೆಯಲಾಗಿದೆ ಎಂದು ಬರೆದಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಮೂಡ್ಲಗಿರಿಯಯ್ಯನವರಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಇನ್ನು ಎರಡು ಆಸ್ತಿಗಳು ಇವೆ. ಸದರಿ ಆಸ್ತಿ ಮೂಡ್ಲಗಿರಿಯಯ್ಯನಿಗೆ ಪಿತ್ರಾರ್ಜಿತ ಆಸ್ತಿಯಾಗಿದ್ದು, ಪೌತಿನಾಥೆಯಿಂದ ಬಂದಿರುತ್ತದೆ. ಮೂಡ್ಲಗಿರಿಯಯ್ಯನವರಿಗೆ ರಂಗಮ್ಮ ಮತ್ತು ಚಿಕ್ಕಮ್ಮ ಎನ್ನುವ ಸಹೋದರಿಯರು ಇದ್ದರು ಎಂದರೆ ಸಾಕ್ಷಿಯು ಅವರು ಮೃತರಾಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರ ಪೈಕಿ ರಂಗಮ್ಮನವರಿಗೆ ಗಂಡ ಮಕ್ಕಳು

ಇರುವುದಿಲ್ಲ. ಚಿಕ್ಕಮ್ಮನವರಿಗೆ ಮಕ್ಕಳಿರುತ್ತಾರೆ. ಮೂಡ್ಲಗಿರಿಯಯ್ಯನ ಕುಟುಂಬದಲ್ಲಿ ವಿಭಾಗವಾಗಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿಪಿ.1ರ ಆಸ್ತಿ ಮೂಡ್ಲಗಿರಿಯಯ್ಯನವರಿಗೆ ಪೌತಿನಾಥೆಯಿಂದ ಬಂದಿದ್ದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ.

3. ನಿಪಿ.3 ರಿಂದ ನಿಪಿ.8ರಲ್ಲಿ ಚಿಕ್ಕಯ್ಯ ಬಿನ್ ರೇವಯ್ಯ ಎಡಿಎಲ್‌ಆರ್ ಎಂ ಆರ್ 8 ಎಂದು ನಮೂದಾಗಿರುವುದು ಹೇಗೆ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ವಿಚಾರದ ಕುರಿತು ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂ.73/5 ಗೆ ಎಡಿಎಲ್‌ಆರ್ 670 ಆಗುವ ಮೊದಲು ಬೇರೆ ಸರ್ವೆ ನಂಬರ್ ಇತ್ತು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನನ್ನ ಪ್ರಕಾರ ದಾವಾ ಆಸ್ತಿಯ ಸ್ವಾಧೀನವನ್ನು ನಿಪಿ.1ಕ್ಕೂ ಮೊದಲು ನನ್ನ ತಂದೆಯಲ್ಲಿತ್ತು.

4. ದಾವಾ ಆಸ್ತಿಯಲ್ಲಿ 125 ಅಡಿಕೆ ಸಸಿಗಳಿವೆ. ಸಾಕ್ಷಿಗೆ ಒಂದು ಫೋಟೋ ತೋರಿಸಿ ದಾವಾ ಆಸ್ತಿಗಳಲ್ಲಿರುವ ಅಡಿಕೆ ಸಸಿಗಳು ಫೋಟೋದಲ್ಲಿ ಕಂಡು ಬರುತ್ತದೆ ಎಂದು ಸೂಚಿಸಲಾಗಿ, ಸಾಕ್ಷಿ ಅವುಗಳನ್ನು ನೋಡಿ ಒಪ್ಪಿದ ಕಾರಣ, ಅವುಗಳನ್ನು ನಿಡಿ.1 ಮತ್ತು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.1 ಮತ್ತು ನಿಡಿ.2ರಲ್ಲಿ ಕಾಣುವ ಅಡಿಕೆ ಮರಗಳು 8-9 ವರ್ಷಗಳದ್ದು. ನಿಡಿ.1 ರಲ್ಲಿ ಕಾಣುವ ಪಾರ್ಥೇನಿಯಂ ಬೆಳೆದಿರುವ ಖಾಲಿ 5 ಗುಂಟೆ ಜಾಗ ದಾವಾ ಆಸ್ತಿಯ 15 ಗುಂಟೆಯ ಪೈಕಿ 5 ಗುಂಟೆಯಾಗಿರುತ್ತದೆ. ಪಾರ್ಥೇನಿಯಂ ಬೆಳೆದಿರುವ ಖಾಲಿ ಜಾಗ ಉಳುಮೆ ಮಾಡಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ಗಲಾಟೆ ಮಾಡಿದ ಕಾರಣ, ಉಳುಮೆ ಮಾಡಿಲ್ಲ ಎಂದು ನುಡಿಯುತ್ತಾರೆ.

5. ಬಿಸ್ಕುರಮಾ ಎಂದರೆ ನನ್ನ ತಾಯಿ. ನನ್ನ ತಾಯಿ ಸರ್ವೆ ನಂ.73/4 ಮತ್ತು 74/2ಕ್ಕೆ ಖಾತೆ ಪಹಣಿ ಮಾಡಲು ಅರ್ಜಿ ನೀಡಿದ್ದರು ಎಂದರೆ ಸರಿ. ಸದರಿ ಅರ್ಜಿಗೆ ಪ್ರತಿವಾದಿಗಳು ಒಟ್ಟು ಕುಟುಂಬದ ಆಸ್ತಿ ಖಾತೆ ಪಹಣಿ ಮಾಡಬಾರದು ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.